ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.94/2020

| | | | |
|---|---|---|---|
| ಹೆಸರು | : | ವಿಜಯ್ ಕುಮಾರ್ | ಸಿ .ಡಬ್ಲ್ಯೂ :15 |
| ತಂದೆ ಹೆಸರು | : | ಚನ್ನವೀರಯ್ಯ | ಪಿ .ಡಬ್ಲ್ಯೂ :12 |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ಪೊಲೀಸ್ ಪೇದೆ, ಗುಬ್ಬಿ ಠಾಣೆ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 18-11-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

2016 ರಿಂದ 2022 ರವರೆಗೆ ಮತ್ತು 2023 ರಿಂದ ಇಂದಿನವರೆಗೂ ಗುಬ್ಬಿ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 22-09-2019 ರಂದು ಗುಬ್ಬಿ ತಾಲ್ಲೂಕಿನ ಬಾಬು ಜಗಜೀವನ್ ರಾಮ್ ಪಾರ್ಕ್ ನಲ್ಲಿರುವ ಗಣೇಶ್ ಮೂರ್ತಿಯ ವಿಸರ್ಜನೆಯ ಸಮಯ ಬಂದೋಬಸ್ತಿಗೆಂದು ನನ್ನನ್ನು ಮತ್ತು PC 205 ಅಭಿರಾಮ್ ರವರನ್ನು ನೇಮಿಸಲಾಗಿತ್ತು . ನಾನು ಆ ದಿನ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 12.00 ಗಂಟೆಯಲ್ಲಿ ಗಣೇಶ್ ಮೂರ್ತಿಯ ವಿಸರ್ಜನೆಯ ಸಮಿತಿಯವರು ಡಿ ಜೆ ಹಾಕಿಸಲು ಅನುಮತಿ ನೀಡಿಲ್ಲವೆಂದು ಗಲಾಟೆ ನಡೆಸಲು ಪ್ರಾರಂಭಿಸಿದರು . ಅವರೆಲ್ಲರೂ ರಸ್ತೆಯ ಮೇಲೆ ಕುಳಿತುಕೊಂಡರು . ಚಾಸಾ -16 ರವರು ಚಾಸಾ -23 ರವರೆಗೆ ಕರೆ ಮಾಡಿ ವಿಚಾರ ತಿಳಿಸಿದರು ಮತ್ತು ಎಲ್ಲರೂ ರಸ್ತೆಯ ತಡೆ ನಡೆಸಿದ್ದು ವಾಹನಗಳು ಓಡಾಡಲು ಅವಕಾಶ ನೀಡುತ್ತಿಲ್ಲ ಎಂದು ತಿಳಿಸಿದರು . ಚಾಸಾ -20 ಮತ್ತು ASI ರವರುಗಳಾದ ವೆಂಕಟೇಶ್ ಮತ್ತು ತೋಟಾರಾಧ್ಯ ಹಾಗೂ WPC ಸೈನಾಜ್ ನದಾಫ್ ,ಮುಖ್ಯ ಪೇದೆಗಳಾದ ಬೋರಯ್ಯ ರವರು ಸ್ಥಳಕ್ಕೆ ಬಂದಿದ್ದರು . ಚಾಸಾ -20 ರವರು ಎಷ್ಟು ತಿಳುವಳಿಕೆ ಹೇಳಿದರು ಅವರು ಕೇಳಲಿಲ್ಲ , ರಸ್ತೆಯಲ್ಲಿ ಆಂಬುಲೆನ್ಸ್ ಓಡಾಡಲು ಅವಕಾಶ ನೀಡದೆ ಡಿ ಜೆ ಹಾಕಬೇಕೆಂದು ಆರೋಪಿತರುಗಳು ಎನ್ ಹೆಚ್ 206 ರ ರಸ್ತೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದರು . ಸ್ಥಳದಲ್ಲಿದ್ದ ವ್ಯಕ್ತಿಗಳ ಹೆಸರುಗಳನ್ನು ಕೇಳಲಾಗಿ ಒಬ್ಬರ ಹೆಸರು ಬಸವರಾಜು ಎಂದು ತಿಳಿಯಿತು ಅವರೊಡನೆ ಇನ್ನೂ 12 ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು . ಸ್ಥಳದಲ್ಲಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 2 ರಿಂದ 6 , 8 , 10 ರಿಂದ 14 ನೇ ಆರೋಪಿತರುಗಳನ್ನು ಗುರುತಿಸಿದ್ದಾರೆ . 8 ಮತ್ತು 9 ನೇ

ಆರೋಪಿತರುಗಳು ಗೈರು ಹಾಜರಿದ್ದು ಅವರ ಗುರುತು ಪತ್ತೆಯ ಬಗ್ಗೆ ತಕರಾರು ಇಲ್ಲ ವೆಂದು ಅವರ ಪರ ವಕೀಲರು ತಿಳಿಸಿದ್ದಾರೆ . ಮೇಲಿನ ವಿಚಾರಗಳ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಮೇಲೆ ಹೇಳಿದ ದಿನಾಂಕದಂದು ನನ್ನನ್ನು ಮೇಲೆ ಹೇಳಿದ ಕರ್ತವ್ಯಕ್ಕೆ ನೇಮಸಿದ್ದ ಸಂಬಂಧ ನನಗೆ ಪ್ರತ್ಯೇಕ ದಾಖಲೆ ನೀಡಿಲ್ಲ , ಠಾಣಾ ಡೈರಿಯಲ್ಲಿ ನಮೂದು ಇರುತ್ತದೆ . ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ . ಮೇಲೆ ಹೇಳಿದ ದಿನಾಂಕದಂದು ಗುಬ್ಬಿ ಪೊಲೀಸ್ ಠಾಣೆಯಲ್ಲಿ ವೆಂಕಟೇಶ್ ಎಂಬ ಪೇದೆಯನ್ನು ಹೊರತು ಪಡಿಸಿ ಉಳಿದ ಎಲ್ಲರನ್ನು ಶಿರಾದ ಗಣಪತಿ ಉತ್ಸವದ ಬಂದೋಬಸ್ತು ಕರ್ತವ್ಯಕ್ಕೆ ನೇಮಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರುಗಳೆಲ್ಲರೂ ಗುಬ್ಬಿಯ ತಾಲ್ಲೂಕಿನ ಬಾಬು ಜಗಜೀವನ್ ರಾಮ್ ನಗರದ ನಿವಾಸಿಗಳೆಂದರೆ ಸರಿ . ನಾನು ಹೇಳುವಂತೆ ಆರೋಪಿತರುಗಳು ಡಿ ಜೆ ಹಾಕಬೇಕೆಂದು ಯಾವುದೇ ಪ್ರತಿಭಟನೆ ಮಾಡಿಲ್ಲ ಎಂದರೆ ಸರಿಯಲ್ಲ. 2019 ನೇ ಸಾಲಿನಲ್ಲಿ ಕರೋನಾ ಖಾಯಿಲೆ ಇದ್ದ ಕಾರಣ ಯಾವುದೇ ಕಾರ್ಯಕ್ರಮಗಳನ್ನು ಮಾಡಲು ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನದಂದು ಯಾವ ನೋಂದಣಿ ಸಂಖ್ಯೆಯ ಆಂಬುಲೆನ್ಸ್ ಬಂದಿತ್ತು ಎಂದರೆ ಸಾಕ್ಷಿಯು ನೋಂದಣಿ ಸಂಖ್ಯೆ ಗೊತ್ತಿಲ್ಲ , ವಾಹನಗಳನ್ನು ಅವರು ತಡೆದಿದ್ದರು ಎಂದು ತಿಳಿಸಿದ್ದಾರೆ . ನಾನು ಹೇಳುವಂತೆ ಆರೋಪಿತರುಗಳು ಮೇಲೆ ಹೇಳಿದ ಸ್ಥಳಕ್ಕೆ ಬಂದಿಲ್ಲ , ಪೊಲೀಸರ ವಿರುದ್ದ ಧಿಕ್ಕಾರ ಎಂದು ಕೂಗಿಲ್ಲ , ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ , ಯಾವುದೇ ಪ್ರತಿಭಟನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರುಗಳು ಜೆ ಡಿ ಎಸ್ ಪಕ್ಷದ ಕಾರ್ಯಕರ್ತರುಗಳಾಗಿದ್ದು 2019 ರಲ್ಲಿ ಬಿ ಜೆ ಪಿ ಪಕ್ಷದ ಆಡಳಿತವಿದ್ದ ಕಾರಣ ರಾಜಕೀಯದ ದುರುದ್ದೇಶದಿಂದ ಆರೋಪಿತರುಗಳ ವಿರುದ್ದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.